ನನ್ನದು ನನ್ನದು ಎನ್ನುವ ದೇಹ ಅಭಿಮಾನವನ್ನು ಬಿಟ್ಟು ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡಿ

ಇಂದು ಬಾಪ್ದಾದಾರವರು ತನ್ನ ನಾಲ್ಕಾರು ಕಡೆಯ ಶ್ರೇಷ್ಠ ಬ್ರಾಹ್ಮಣ ಆತ್ಮಗಳನ್ನು ನೋಡುತ್ತಿದ್ದರು. ಬ್ರಾಹ್ಮಣ ಅಥಾರ್ತ್ ಬ್ರಹ್ಮಾ ಮುಖ ವಂಶಾವಳಿ. ಪ್ರತಿಯೊಂದು ಬ್ರಾಹ್ಮಣ ಆತ್ಮನ ಭಾಗ್ಯವನ್ನು ನೋಡಿ ಬಾಪ್ದಾದಾರವರು ಹರ್ಷಿತ ರಾಗುತ್ತಾರೆ. ಪ್ರತಿಯೊಂದು ಬ್ರಾಹ್ಮಣ ಆತ್ಮನಿಗೂ ಜನ್ಮವಾಗುತ್ತಿದ್ದಂತೆಯೇ ಸ್ವಯಂ ಬ್ರಹ್ಮಾ ತಂದೆಯ ಮೂಲಕ ಮಸ್ತಕದಲ್ಲಿ ಸ್ಮೃತಿಯ ತಿಲಕ ಇಡಲಾಗುತ್ತದೆ. ಸ್ವಯಂ ಭಗವಂತ ತಿಲಕಧಾರಿಯನ್ನಾಗಿ ಮಾಡುತ್ತಾರೆ. ಜೊತೆಯಲ್ಲಿ ಪ್ರತಿಯೊಂದು ಬ್ರಾಹ್ಮಣ ಆತ್ಮನನ್ನು ಪವಿತ್ರತೆಯ ಮಹಾಮಂತ್ರದ ಮೂಲಕ ಲೈಟ್ ನ (ಪ್ರಕಾಶದ) ಕಿರೀಟವನ್ನು ಧಾರಣೆ ಮಾಡಿಸುತ್ತಾರೆ ಹಾಗೂ ಜೊತೆ ಜೊತೆ ಪ್ರತಿಯೊಂದು ಬ್ರಾಹ್ಮಣ ಆತ್ಮನಿಗೆ ವಿಶ್ವಕಲ್ಯಾಣಕಾರಿ ಆತ್ಮ ಆಗುವ ಜವಾಬ್ದಾರಿಯ ಕಿರೀಟವನ್ನು ಧಾರಣೆ ಮಾಡಿಸುತ್ತಾರೆ. ಡಬಲ್ ಕಿರೀಟವಾಗಿದೆ ಹಾಗೂ ಭಗವಂತ ಸ್ವಯಂ ತನ್ನ ಹೃದಯ ಸಿಂಹಾಸನಾಧಿಕಾರಿಯಾಗಿ ಮಾಡುತ್ತಾರೆ. ಎಂದ ಮೇಲೆ ಜನ್ಮವಾಗುತ್ತಿದ್ದಂತೆಯೇ ತಿಲಕ, ಕಿರೀಟ ಹಾಗೂ ಸಿಂಹಾಸನಾಧಾರಿ ಆಗಿ ಹೋಗುತ್ತೀರಿ. ಇಂತಹ ಶ್ರೇಷ್ಠ ಭಾಗ್ಯ ಇಡೀ ಕಲ್ಪದಲ್ಲಿ ಯಾವ ಆತ್ಮನದ್ದು ಇರಲು ಸಾಧ್ಯವಿಲ್ಲ. ಹಾಗಾದರೆ ಇಷ್ಟು ಶ್ರೇಷ್ಠ ಭಾಗ್ಯದ ಸ್ಮೃತಿ ಇರುತ್ತದೆಯೇ- ನಾವು ಬ್ರಾಹ್ಮಣ ಜನ್ಮ ಪಡೆಯುತ್ತಿದ್ದಂತೆಯೇ ಇಂತಹ ಭಾಗ್ಯವಂತರಾಗುತ್ತೇವೆ ಎಂದು? ನೀವು ಬ್ರಾಹ್ಮಣರ ಚಿಹ್ನೆಗಳನ್ನು ಪ್ರಪಂಚದವರು ಶ್ರೀ ಕೃಷ್ಣನ ರೂಪದಲ್ಲಿ ತೋರಿಸಿದ್ದಾರೆ. ಆದರೆ ಅವರು ವಿಶ್ವದ ರಾಜಕುಮಾರರಾಗಿದ್ದಾರೆ ಆದ್ದರಿಂದ ರಾಜ್ಯದ ಗುರುತು ತಿಲಕ, ಕಿರೀಟ, ಸಿಂಹಾಸನ ಕೊಡುತ್ತಾರೆ. ಆದರೂ ಸಹ ಅವರಿಗೆ ಬಾಲ್ಯಾವಸ್ಥೆಯಲ್ಲಿ ತಿಲಕ, ಕಿರೀಟ, ಸಿಂಹಾಸನ ಸಿಗುವುದಿಲ್ಲ ಆದರೆ ನೀವು ಬ್ರಾಹ್ಮಣರಿಗೆ ತಿಲಕ, ಕಿರೀಟ ಹಾಗೂ ಸಿಂಹಾಸನ ಮೂರು ಸಹ ಪ್ರಾಪ್ತಿಯಾಗುತ್ತದೆ, ಪರಮಾತ್ಮ ತಂದೆಯ ಮೂಲಕ ಈ ಮೂರು ಪ್ರಾಪ್ತಿಗಳು ಸಿಗುವುದು ಇದು ಕೇವಲ ನೀವು ಬ್ರಾಹ್ಮಣರ ಭಾಗ್ಯದಲ್ಲಿದೆ. ಬಾಪ್ದಾದಾರವರು ನೋಡುತ್ತಿದ್ದರು- ನನ್ನ ಮಕ್ಕಳ ಭಾಗ್ಯದ ನಕ್ಷತ್ರ ಎಷ್ಟು ದೊಡ್ಡದಾಗಿದೆ ಪ್ರತಿಯೊಬ್ಬರ ಮಸ್ತಕದಲ್ಲಿ ಹೊಳೆಯುತ್ತಿದೆ. ಇಂತಹ ಭಾಗ್ಯದ ನಕ್ಷತ್ರ ನಿಮಗೂ ಸಹ ನಿಮ್ಮಲ್ಲಿ ಕಾಣಿಸುತ್ತದೆಯೇ? ಸದಾ ಹೊಳೆಯುತ್ತಿರುವುದು ಕಾಣಿಸುತ್ತದೆಯೇ ಅಥವಾ ಕೆಲವೊಮ್ಮೆ ಬಹಳ ಚೆನ್ನಾಗಿ ಹೊಳೆಯುವುದು ಹಾಗೂ ಇನ್ನೂ ಕೆಲವೊಮ್ಮೆ ನಕ್ಷತ್ರದ ಹೊಳಪು ಕಡಿಮೆಯಾಗಿ ಹೋಗುತ್ತದೆಯೇ? ಈ ಭಾಗ್ಯದ ನಕ್ಷತ್ರ ವಿಚಿತ್ರ ನಕ್ಷತ್ರವಾಗಿದೆ. ಬಾಪ್ದಾದಾರವರು ನೀವು ಮಕ್ಕಳನ್ನು ಯಾವಾಗಲೂ ನೋಡುತ್ತಾರೆ ಎಂದರೆ, ಮಿಲನ ಮಾಡುತ್ತಾರೆ ಎಂದರೆ ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ನಕ್ಷತ್ರ ಹೊಳೆಯುತ್ತಿರುವುದನ್ನು ನೋಡಿ ಹರ್ಷಿತರಾಗುತ್ತಾರೆ. ನಕ್ಷತ್ರ ಹೊಳೆಯುತ್ತಾ ಹೊಳೆಯುತ್ತಾ ಅದರ ಹೊಳಪು ಕಡಿಮೆ ಏಕೆ ಆಗುತ್ತದೆ? ಇದರ ಕಾರಣವನ್ನು ನೀವೆಲ್ಲರೂ ಚೆನ್ನಾಗಿ ತಿಳಿದುಕೊಂಡಿದ್ದೀರಿ!

ಬಾಪ್ದಾದಾರವರಿಗೆ ಮಕ್ಕಳ ಚಾರ್ಟ್ ನೋಡಿ ಮುಗುಳ್ನಗು ಬರುತ್ತದೆ, ಯಾರೊಂದಿಗಾದರೂ ಕೇಳಿದರೆ ನೀವು ಏನಾಗುತ್ತೀರಿ? ಲಕ್ಷ್ಯ ಏನಾಗಿದೆ? ಆಗ ಬಹುತೇಕರು ಒಂದೇ ಉತ್ತರವನ್ನು ಕೊಡುತ್ತಾರೆ ನಂಬರ್ ವನ್ ಆಗಬೇಕು, ಸೂರ್ಯವಂಶಿ ಆಗಬೇಕು, ಚಂದ್ರವಂಶಿ ರಾಜ ರಾಮ- ಸೀತೆ ಆಗುವುದನ್ನು ಸಹ ಬಯಸುವುದಿಲ್ಲ. ಆದರೆ ಯಾವಾಗ ಲಕ್ಷ್ಯ ಸೂರ್ಯವಂಶಿ ನಂಬರ್ ಒನ್ ಆದಾಗಿದೆ, ಎಂದ ಮೇಲೆ ಎಂತಹ ಲಕ್ಷ್ಯವೋ ಅಂತಹ ಲಕ್ಷಣ ಸದಾ ಸೂರ್ಯವಂಶೀಯರದ್ದು ಕಾಣಿಸುವುದು ಅವಶ್ಯಕವಾಗಿದೆ. ಮಕ್ಕಳ ಲಕ್ಷ್ಯ ಸೂರ್ಯವಂಶೀಯರದ್ದಾಗಿದೆ ಅರ್ಥಾತ್ ಸದಾ ವಿಜಯದಾಗಿದೆ, ನಂಬರ್ಒನ್ ಸೂರ್ಯವಂಶೀಯರ ಚಿನ್ಹೆಯಾಗಿದೆ ಸದಾ ವಿಜಯ. ಸೂರ್ಯನ ಕಲೆಗಳು ಕಡಿಮೆ ಹಾಗೂ ಹೆಚ್ಚಿಗೆ ಆಗುವುದಿಲ್ಲ. ಉದಯವಾಗುತ್ತದೆ ಹಾಗೂ ಅಸ್ತವಾಗುತ್ತದೆ ಆದರೆ ಚಂದ್ರವಂಶಿಯರಂತೆ ಕಲೆಗಳು ಕಡಿಮೆಯಾಗುವುದಿಲ್ಲ. ಎಂದ ಮೇಲೆ ಸೂರ್ಯವಂಶೀಯರ ಚಿನ್ಹೆಯಾಗಿದೆ ಸದಾ ಏಕ ರಸ ಹಾಗೂ ವಿಜಯಿ. ಚಂದ್ರವಂಶಿಯರನ್ನು ಕ್ಷತ್ರಿಯರು ಎಂದು ಹೇಳಲಾಗುತ್ತದೆ, ಕ್ಷತ್ರಿಯ ಜೀವನದಲ್ಲಿ ಕೆಲವೊಮ್ಮೆ ಸೋಲು ಕೆಲವೊಮ್ಮೆ ಗೆಲುವು ನಡೆಯುತ್ತದೆ. ಕೆಲವೊಮ್ಮೆ ಸಫಲತಾಮೂರ್ತಿ ಕೆಲವೊಮ್ಮೆ ಪರಿಶ್ರಮದ ಮೂರ್ತಿ. ಯುದ್ಧ ಮಾಡುವುದು ಅರ್ಥಾತ್ ಪರಿಶ್ರಮ ಪಡುವುದು. ಚಂದ್ರವಂಶಿಯರ ಕಲೆಗಳು ಏಕರಸವಾಗಿರುವುದಿಲ್ಲ. ಆದ್ದರಿಂದ ಲಕ್ಷ್ಯ ಹಾಗೂ ಲಕ್ಷಣವನ್ನು ಸಮಾನವನ್ನಾಗಿ ಮಾಡಿ. ಎಂತಹ ಲಕ್ಷ್ಯವನ್ನು ಇಟ್ಟುಕೊಂಡಿದ್ದೀರಿ- ತಂದೆಯ ಸಮಾನರಾಗಬೇಕು, ಪ್ರತಿಯೊಬ್ಬ ಮಗು ಸಹ ಇದನ್ನೇ ಹೇಳುತ್ತಾರೆ ತಂದೆಯ ಸಮಾನರಾಗಬೇಕು. ಎಂದ ಮೇಲೆ ತಂದೆ ಸದಾ ಸಹಜ ವಿಜಯಿ ಸ್ವರೂಪರಾಗಿದ್ದಾರೆ. ಒಂದು ವೇಳೆ ಏಕರಸ ಸ್ಥಿತಿ ಇಲ್ಲದಿದ್ದರೆ ನಂಬರ್ ವನ್ ಹೇಗೆ ಆಗುವಿರಿ? ನಂಬರ್ ಒನ್ ನಲ್ಲಿ ಬರುತ್ತೀರಾ? ಒಂದಾಗಿದೆ ನಂಬರ್ ವನ್ ಹಾಗೂ ಎರಡನೆಯದಾಗಿದೆ ನಂಬರ್ ವಾರ್. ಹಾಗಾದರೆ ತಮ್ಮೊಂದಿಗೆ ತಾವು ಕೇಳಿಕೊಳ್ಳಿ ನಾವು ನಂಬರ್ ಒನ್ ಆಗಿದ್ದೇವೆಯೋ ಅಥವಾ ನಂಬರಿನ ಪಟ್ಟಿಯಲ್ಲಿ ಬರುತ್ತೇವೆಯೋ? ನಂಬರ್ ವನ್ ಅರ್ಥಾತ್ ಬ್ರಹ್ಮಾ ತಂದೆಯನ್ನು ಅನುಕರಣೆ ಮಾಡುವುದು. ಬಾಪ್ದಾದಾರವರು ಸಹಜ ಸಾಧನವನ್ನು ತಿಳಿಸುತ್ತಿದ್ದಾರೆ- ಫಾಲೋ ಫಾದರ್ ಮಾಡುವುದರಲ್ಲಿ ಕಡಿಮೆ ಪರಿಶ್ರಮ ಹಿಡಿಸುತ್ತದೆ. ಬ್ರಹ್ಮಾನ ಕಾಲುಗಳು ಅರ್ಥಾತ್ ಹೆಜ್ಜೆ, ಪ್ರತಿಯೊಂದು ಕಾರ್ಯದ ಹೆಜ್ಜೆಗಳ ರೂಪಿ ಕಾಲುಗಳ ಚಿಹ್ನೆಗಳಿವೆ. ಕಾಲಿನ ಮೇಲೆ ಕಾಲನ್ನು ಇಟ್ಟು ನಡೆಯುವುದು ಸಹಜವಾಗಿರುತ್ತದೆ. ಹೊಸ ದಾರಿಯನ್ನು ಹುಡುಕಬೇಕಾಗಿಲ್ಲ, ಕಾಲಿನ ಮೇಲೆ ಕಾಲು ಅರ್ಥಾತ್ ಹೆಜ್ಜೆಯ ಮೇಲೆ ಹೆಜ್ಜೆ ಇಡುವುದು. ಯಾವುದೇ ಕಾರ್ಯ ಮಾಡುತ್ತಿರಿ ಮನಸಾ ಸಂಕಲ್ಪ ಆಗಿರಲಿ, ಮಾತುಗಳಾಗಿರಲಿ

ಕರ್ಮದಲ್ಲಿ ಸಂಬಂಧ ಸಂಪರ್ಕದಲ್ಲಿ ಬರುತ್ತಿರಿ ಎಂದರೆ ಪ್ರತಿಯೊಂದು ಕರ್ಮ ಮಾಡುವ ಮೊದಲು ಇದನ್ನು ಯೋಚಿಸಿ- ನಾನು ಬ್ರಾಹ್ಮಣ ಆತ್ಮ ಕರ್ಮ ಮಾಡುತ್ತಿದ್ದೇನೆ, ಇದು ಬ್ರಹ್ಮಾ ತಂದೆಯ ಸಮಾನವಾಗಿದೆಯೇ? ಬ್ರಹ್ಮಾ ತಂದೆಯ ಸಂಕಲ್ಪ ಏನಾಗಿತ್ತು? ನನ್ನ ಸಂಕಲ್ಪವು ಅದೇ ರೀತಿ ಇದೆಯೇ? ಪ್ರತಿಯೊಂದು ಮಾತು ಬ್ರಹ್ಮಾ ತಂದೆಯ ಸಮಾನ ಇದೆಯೇ? ಒಂದುವೇಳೆ ಇಲ್ಲವಾಗಿದ್ದರೆ ಮಾಡಬೇಡಿ. ಯೋಚಿಸಬೇಡಿ, ಮಾತನಾಡಬೇಡಿ, ಮಾಡಬೇಡಿ. ಹೀಗಲ್ಲ ಬ್ರಹ್ಮಾ ತಂದೆಯ ಹೆಜ್ಜೆ ಒಂದು ಮಕ್ಕಳ ಹೆಜ್ಜೆ ಇನ್ನೊಂದು, ಆಗ ಯಾವ ಲಕ್ಷವಿದೆ, ಗುರಿ ಇದೆ- ತಂದೆಯ ಸಮಾನ ಆಗಬೇಕು, ಅದು ಹೇಗೆ ಆಗಲು ಸಾಧ್ಯ? ಒಂದುವೇಳೆ ಬ್ರಹ್ಮಾನ ಪ್ರತಿಯೊಂದು ಹೆಜ್ಜೆಯ ಸಮಾನ ಹೆಜ್ಜೆ ಮೇಲೆ ಹೆಜ್ಜೆ ಅನುಕರಣೆ ಮಾಡುತ್ತಾ ನಡೆದರೆ ಒಂದಂತೂ ಸದಾ ತಮ್ಮನ್ನು ತಾವು ಸಹಜ ಪುರುಷಾರ್ಥಿ ಅನುಭವ ಮಾಡುವಿರಿ ಹಾಗೂ ಸದಾ ಸಂಪೂರ್ಣತೆಯ ಗುರಿ ಸಮೀಪ ಅನುಭವ ಮಾಡುವಿರಿ.

ಬ್ರಹ್ಮಾ ತಂದೆಯ ಸಮಾನ ಅರ್ಥಾತ್ ಸಂಪೂರ್ಣತೆಯ ಗುರಿಯನ್ನು ತಲುಪುವುದು. ಎಂದ ಮೇಲೆ ಬ್ರಹ್ಮಾ ತಂದೆ ವತನದಲ್ಲಿ ನೀವು ಮಕ್ಕಳ ಸಂಪೂರ್ಣ ಅವ್ಯಕ್ತ ಫರಿಶ್ತೆ ಆಗುವುದರ ಆಹ್ವಾನ ಮಾಡುತ್ತಿದ್ದರು. ಬ್ರಹ್ಮಾ ತಂದೆಯ ಆಹ್ವಾನದ ಗೀತೆ ಹಾಗೂ ಮಧುರ ಆಹ್ವಾನದ ಧ್ವನಿ ಕೇಳಿಸುತ್ತಿಲ್ಲವೇ? "ಬನ್ನಿ ಮಕ್ಕಳೇ, ಮಧುರ ಮಕ್ಕಳೇ, ಬೇಗ ಬೇಗ ಬನ್ನಿ" ಈ ಗೀತೆ ಅಥವಾ ಮಾತು ಕೇಳಿಸುತ್ತಿಲ್ಲವೇ? ಬ್ರಹ್ಮಾ ತಂದೆಯ ಕರೆಯನ್ನು ಕೇಳಿಸಿಕೊಳ್ಳಿ, ಪರಿಶೀಲಿಸಿಕೊಳ್ಳಿ. ಬ್ರಹ್ಮಾ ತಂದೆ ಇದನ್ನೇ ಹೇಳುತ್ತಾರೆ- ಮಕ್ಕಳೇ 99 ರ ವರ್ಷದ ಬಗ್ಗೆ ಬಹಳ ಯೋಚಿಸುತ್ತಾರೆ, ಏನಾಗುವುದು! ಹೀಗಾಗುವುದು, ಹಾಗಾಗುವುದು.. ಈ ರೀತಿ ಆಗುತ್ತದೆಯೋ ಇಲ್ಲವೋ...! ಹೀಗಾಗುವುದು.- ಇಂತಹ ಯೋಚನೆಗಳಲ್ಲಿ ಜಾಸ್ತಿ ಇರುತ್ತೀರಿ. ಹೀಗಂತೂ ಆಗುವುದಿಲ್ಲ! ಕೆಲವೊಮ್ಮೆ ಯೋಚಿಸುತ್ತಿರುತ್ತೀರಿ, ಕೆಲವೊಮ್ಮೆ ಯೋಚಿಸುತ್ತಿರುವುದಿಲ್ಲ. ಹೀಗಾಗುವುದು, ಆಗುವುದು ಎಂಬ ಗೀತೆಯನ್ನು ಹಾಡುತ್ತಾ ಇರುತ್ತೀರಿ. ಆದರೆ ತಮ್ಮ ಫರಿಶ್ತಾತನದ, ಸಂಪನ್ನ ಸಂಪೂರ್ಣ ಸ್ಥಿತಿಯಲ್ಲಿ ತೀವ್ರ ಗತಿಯಿಂದ ಮುಂದುವರೆಯುವ ಶ್ರೇಷ್ಠ ಸಂಕಲ್ಪ ಕಡಿಮೆ ಮಾಡುತ್ತೀರಿ. ಆಗುತ್ತದೆಯೋ? ಏನಾಗುತ್ತದೆ!! ಇಂತಹ ಆಗುತ್ತದೆ ಆಗುತ್ತದೆ ಎಂಬ ಗೀತೆಯನ್ನು ಹೆಚ್ಚು ಹಾಡುತ್ತೀರಿ. ಬಾಬಾರವರು ಹೇಳುತ್ತಾರೆ- ಏನೇ ಆಗಲಿ ಆದರೆ ನಿಮ್ಮ ಲಕ್ಷ್ಯ ಏನಾಗಿದೆ? ಏನಾಗುತ್ತದೆಯೋ ಅದನ್ನು ನೋಡುವ ಹಾಗೂ ಕೇಳುವ ಲಕ್ಷ್ಯಯವಿದೆಯೇ ಅಥವಾ ಬ್ರಹ್ಮಾ ತಂದೆಯ ಸಮಾನ ಫರಿಶ್ತೆ ಆಗುವ ಲಕ್ಷವಿದೆಯೇ? ಅದರ ತಯಾರಿಯನ್ನು ಮಾಡಿಕೊಂಡಿದ್ದೀರಾ? ಪ್ರಕೃತಿ ತನ್ನ ಯಾವುದೇ ರೂಪ ರಂಗನ್ನು ತೋರಿಸಲಿ, ನೀವು ಫರಿಶ್ತೆಗಳಾಗಿ, ತಂದೆಯ ಸಮಾನ ಅವ್ಯಕ್ತ ರೂಪಧಾರಿಗಳಾಗಿ ಪ್ರಕೃತಿಯ ಪ್ರತಿಯೊಂದು ದೃಶ್ಯವನ್ನು ನೋಡುವುದಕ್ಕಾಗಿ ತಯಾರಾಗಿದ್ದೀರಾ? ಪ್ರಕೃತಿಯ ಏರುಪೇರಿನ ಪ್ರಭಾವದಿಂದ ಮುಕ್ತ ಫರಿಶ್ತೆಗಳಾಗಿದ್ದೀರಾ? ನೀವು ಸ್ಥಿತಿಯ ತಯಾರಿಯಲ್ಲಿ ತೊಡಗಿದ್ದೀರಾ ಅಥವಾ ಏನಾಗುವುದು, ಏನಾಗುವುದು- ಇದರ ಯೋಚನೆಗಳಲ್ಲಿ ತೊಡಗಿದ್ದೀರಾ? ಯಾವುದೇ ಪರಿಸ್ಥಿತಿ ಸಮ್ಮುಖದಲ್ಲಿ ಬಂದರೆ ನೀವು ಪ್ರಕೃತಿ ಪತಿಗಳು ತಮ್ಮ ಪ್ರಕೃತಿ ಪತಿಯ ಸೀಟಿನ ಮೇಲೆ ಸೆಟ್ ಆಗಿ ಇರುತ್ತೀರಾ ಅಥವಾ ಅಪ್ಸೆಟ್ ಆಗುತ್ತೀರಾ? ಇದು ಏನಾಗಿ ಹೋಯಿತು? ಹೀಗಾಗಿ ಹೋಯಿತು, ಹೇಗಾಯಿತು.. ಇಂತಹ ದೃಶ್ಯಗಳ ಸಮಾಚಾರಗಳಲ್ಲಿ ವ್ಯಸ್ತರಾಗುತ್ತೀರಾ ಅಥವಾ ಸಂಪನ್ನತೆಯ ಸ್ಥಿತಿಯಲ್ಲಿ ಸ್ಥಿತರಾಗಿ ಯಾವುದೇ ಪ್ರಕೃತಿಯ ಏರುಪೇರುಗಳು ನಡೆಯುತ್ತಿದ್ದರು ಮೋಡಗಳ ಸಮಾನ ಅನುಭವ ಮಾಡುತ್ತೀರಾ?

ಹಾಗಾದರೆ ಬ್ರಹ್ಮಾ ತಂದೆ ಮಕ್ಕಳೊಂದಿಗೆ ಕೇಳುತ್ತಿದ್ದಾರೆ- ನನ್ನ ಸಮಾನ ಸದಾ ಕಾಲಕ್ಕಾಗಿ ಫರಿಶ್ತೆಗಳಾಗಿದ್ದೀರಾ? ಏಕೆಂದರೆ ನೀವು ಮಕ್ಕಳು ವ್ಯಕ್ತದಲ್ಲಿರುತ್ತಾ ಅವ್ಯಕ್ತರಾಗಬೇಕು. ನೀವು ಹೇಳುವಿರಿ ತಂದೆಯಂತು ಅವ್ಯಕ್ತರಾಗಿ ಬಿಟ್ಟರು, ನಮ್ಮನ್ನು ಸಹ ಅವ್ಯಕ್ತರನ್ನಾಗಿ ಮಾಡಿಬಿಡಿ. ಬ್ರಹ್ಮಾ ತಂದೆ ಹೇಳುತ್ತಾರೆ- ಮೊದಲು ತಮ್ಮೊಂದಿಗೆ ತಾವು ಕೇಳಿಕೊಳ್ಳಿ- ಯಾವ ವಿಶ್ವಕಲ್ಯಾಣದ ಜವಾಬ್ದಾರಿಯ ಕಿರೀಟವನ್ನು ತೊಡಿಸಿದ್ದಾರೆ, ಅದನ್ನು ಸಂಪನ್ನ ಮಾಡಿದ್ದೀರಾ? ವಿಶ್ವಕಲ್ಯಾಣಕಾರಿ, ವಿಶ್ವದ ಕಲ್ಯಾಣ ಸಂಪನ್ನವಾಯಿತೆ? ಮಕ್ಕಳಿಗೆ ವಿಶ್ವಕಲ್ಯಾಣದ ಕಾರ್ಯವನ್ನು ಕೊಡುವುದಕ್ಕಾಗಿ ಬ್ರಹ್ಮಾ ತಂದೆ ಅವ್ಯಕ್ತರಾದರು, ಬಂಧನದಿಂದ ಮುಕ್ತರಾಗಿ ಸೇವೆಯ ವೇಗವನ್ನು ತೀವ್ರ ಗತಿ ಮಾಡಿಸುವುದಕ್ಕಾಗಿ ನಿಮಿತ್ತರಾಗಬೇಕಿತ್ತು. ಯಾವುದರ ಪ್ರತ್ಯಕ್ಷ ಸ್ವರೂಪ ನಾಲ್ಕಾರು ಕಡೆ ನೋಡುತ್ತಿರುವಿರಿ. ದೇಶದಲ್ಲಾಗಲಿ ವಿದೇಶದಲ್ಲಾಗಲಿ ಅವ್ಯಕ್ತ ಬ್ರಹ್ಮಾರವರ ಮೂಲಕ ತೀವ್ರಗತಿ ಆಗಿದೆ ಹಾಗೂ ಆಗಲೇ ಬೇಕಾಗಿದೆ. ಸೇವೆಯಲ್ಲಿ ತೀವ್ರಗತಿಯ ನಿಮಿತ್ತ ಆಧಾರ ಬ್ರಹ್ಮಾ ತಂದೆ ಆಗಬೇಕಿತ್ತು. ಆದರೆ ರಾಜ್ಯ ಅಧಿಕಾರಿ ಒಬ್ಬ ಬ್ರಹ್ಮಾ ತಂದೆ ಆಗುವುದಿಲ್ಲ, ಜೊತೆಯಲ್ಲಿ ಮಕ್ಕಳು ಸಹ ರಾಜ್ಯ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕು ಇದಕ್ಕಾಗಿ ಸಾಕರದಲ್ಲಿ ನಿಮಿತ್ತ ನೀವು ಸಹಕಾರ ರೂಪಧಾರಿ ಮಕ್ಕಳನ್ನು ಮಾಡಿದ್ದಾರೆ. ಆದರೆ ಅಂತ್ಯದಲ್ಲಿ ನೀವೆಲ್ಲ ಮಕ್ಕಳು ವ್ಯಕ್ತದಲ್ಲಿ ಅವ್ಯಕ್ತ ಫರಿಶ್ತೆಗಳಾಗಿ ವಿಶ್ವಕಲ್ಯಾಣದ ಸೇವೆಯ ವೇಗವನ್ನು ತೀವ್ರವನ್ನಾಗಿ ಮಾಡಿ ಸಮಾಪ್ತಿ ಹಾಗೂ ಸಂಪನ್ನರಾಗಬೇಕು ಹಾಗೂ ಮಾಡಬೇಕು.

ಬ್ರಹ್ಮಾ ತಂದೆ ಹೇಳುತ್ತಾರೆ- 99ರಲ್ಲಿ ಸಮಾಪ್ತಿ ಮಾಡುವಿರಾ? ಪ್ರಕೃತಿಗೆ ಒಂದು ಚಪ್ಪಾಳೆಯನ್ನು ಹೊಡೆಯಿರಿ ಹಾಗೂ ಪ್ರಕೃತಿ ತಯಾರಾಗಿ ನಿಂತುಬಿಟ್ಟಿದೆ. ಫರಿಶ್ತೆಗಳ ಸಮಾನ ಡಬಲ್ ಲೈಟ್ ಆಗಿದ್ದೀರಾ? ಕಡಿಮೆ ಎಂದರೆ ಕಡಿಮೆ 108 ಇಂತಹ ಸದಾ ವಿಜಯಿಗಳಾಗಿದ್ದೀರಾ, ಯಾರು ಯಾವುದೇ ಪ್ರಕಾರದ ವ್ಯರ್ಥ ಹಾಗೂ ನಕಾರಾತ್ಮಕ ಸಂಕಲ್ಪ, ಮಾತು ಹಾಗೂ ಕರ್ಮ ಅರ್ಥಾತ್ ಸೇವೆಯ ಸಂಬಂಧ ಸಂಪರ್ಕದಲ್ಲಿ ಸಮೀಪ ಇದ್ದೀರಾ? ವ್ಯರ್ಥ ಹಾಗೂ ನಕಾರಾತ್ಮಕತೆ- ಈ ಹೊರೆ ಸದಾ ಕಾಲಕ್ಕಾಗಿ ಡಬಲ್ ಲೈಟ್ ಫರಿಶ್ತೆ ಆಗಲು ಬಿಡುವುದಿಲ್ಲ. ಎಂದ ಮೇಲೆ ಬ್ರಹ್ಮಾ ತಂದೆ ಕೇಳುತ್ತಾರೆ- ಈ ಹೊರೆಯಿಂದ ಹಗುರರಾಗಿದ್ದೀರಾ? ಅಂಡರ್

ಲೈನ್ ಆಗಿದೆ- "ಸದಾ". ಕಡಿಮೆ ಎಂದರೆ 108 ಆತ್ಮಗಳು ಸದಾ ಫರಿಶ್ತಾ ಜೀವನದ ಅನುಭವ ಮಾಡಿ ಆಗ ಹೇಳಲಾಗುವುದು ಬ್ರಹ್ಮಾ ತಂದೆಯ ಸಮಾನ ಆಗುವುದು. ಹಾಗಾದರೆ ತಂದೆ ಕೇಳುತ್ತಾರೆ- ಚಪ್ಪಾಳೆ ಹೊಡೆಯಬಹುದೇ? ಅಥವಾ 2,000ರಲ್ಲಿ ಚಪ್ಪಾಳೆ ಹೊಡೆಯುತ್ತಿರಾ, 2001ರಲ್ಲಿ ಚಪ್ಪಾಳೆ ಹೊಡೆಯುವುದೇ, ಯಾವಾಗ ಹೊಡೆಯುವುದು? ಏನು ಯೋಚಿಸುತ್ತೀರಿ, ಯಾವಾಗ ಚಪ್ಪಾಳೆ ಹೊಡೆಯಲಾಗುವುದು ಆಗ ಆಗಿಬಿಡುತ್ತೀರಾ, ಈ ರೀತಿ ಯೋಚಿಸುತ್ತೀರಾ? ಏನು ಯೋಚಿಸುತ್ತೀರಿ- ಯಾವಾಗ ಚಪ್ಪಾಳೆ ಹೊಡೆಯಲಾಗುತ್ತದೆ ಆ ಸಮಯದಲ್ಲಿ ಆಗುವಿರಾ? ಏನಾಗುವುದು? ಚಪ್ಪಾಳೆ ಬಾರಿಸುವುದೇ? ಹೇಳಿ ತಯಾರಾಗಿದ್ದೀರಾ? ಪರೀಕ್ಷೆಯನ್ನು ತೆಗೆದುಕೊಳ್ಳಬಹುದೇ? ಹಾಗೆ ಒಪ್ಪಿಕೊಳ್ಳುವುದಿಲ್ಲ, ಪರೀಕ್ಷೆಯನ್ನು ತೆಗೆದುಕೊಳ್ಳುತ್ತೇವೆ, ಶಿಕ್ಷಕಿಯರು ಹೇಳಿ- ಪರೀಕ್ಷೆ ತೆಗೆದುಕೊಳ್ಳಬಹುದೇ? ಎಲ್ಲವನ್ನು ಬಿಡಬೇಕಾಗುತ್ತದೆ. ಮಧುಬನದವರು ಮಧುಬನವನ್ನು ಬಿಡಬೇಕಾಗುತ್ತದೆ, ಜ್ಞಾನ ಸರೋವರದವರು ಜ್ಞಾನ ಸರೋವರವನ್ನು, ಸೇವ ಕೇಂದ್ರದವರು ಸೇವ ಕೇಂದ್ರವನ್ನು, ವಿದೇಶದವರು ವಿದೇಶವನ್ನು, ಎಲ್ಲವನ್ನು ಬಿಡಬೇಕಾಗಿ ಬರುತ್ತದೆ. ಹಾಗಾದರೆ ಸದಾ ತಯಾರಾಗಿದ್ದೀರಾ? ಒಂದು ವೇಳೆ ಎವರ್ ರೆಡಿ ಆಗಿದ್ದರೆ (ಸದಾ ಸಿದ್ಧ). ಕೈಯಿಂದ ಚಪ್ಪಾಳೆ ಹೊಡೆಯಿರಿ. ಎವೆರ್ ರೆಡಿ? ಪರೀಕ್ಷೆ ತೆಗೆದುಕೊಳ್ಳಬಹುದೇ? ನಾಳೆ ಘೋಷಣೆ ಮಾಡಬಹುದೇ? ಅಲ್ಲಿ ಹೋದ ನಂತರವೂ ಬಿಡಬಾರದು, ಅಲ್ಲಿ ಹೋಗಿ ಸ್ವಲ್ಪ ಸರಿ ಮಾಡಿ ಬರುತ್ತೇನೆ, ಹೀಗಲ್ಲ. ಎಲ್ಲಿದ್ದೇನೆ, ಅಲ್ಲಿಯೇ ಇದ್ದೇನೆ. ಈ ರೀತಿ ಸದಾ ತಯಾರು (ಎವರ್ ರೆಡಿ) ತಮ್ಮ ಕಚೇರಿಯು ಅಲ್ಲ, ಹಾಸಿಗೆಯೂ ಅಲ್ಲ, ಕೊಠಡಿಯು ಅಲ್ಲ, ಕಬೋರ್ಡ್ ಸಹ ಅಲ್ಲ. ಸ್ವಲ್ಪ ಕೆಲಸವಿದೆ, ಎರಡು ದಿನದಲ್ಲಿ ಮಾಡಿ ಬರುತ್ತೇವೆ ಹೀಗೆ ಹೇಳಬೇಡಿ. ಇಲ್ಲ. ಆರ್ಡರ್ ಇಸ್ ಆರ್ಡರ್ (ಆಜ್ಞೆ ಎಂದರೆ ಆಜ್ಞೆ) ಯೋಚಿಸಿ ಒಪ್ಪಿಕೊಳ್ಳಿ. ಇಲ್ಲವಾದರೆ ನಾಳೆ ಆಜ್ಞೆ ಹೊರ ಬಂದರೆ ಎಲ್ಲಿ ಹೋಗಬೇಕು, ಎಲ್ಲಿ ಹೋಗಬಾರದು (ಎಲ್ಲಿಯೂ ಹೋಗಲು ಆಗುವುದಿಲ್ಲ). ಆಜ್ಞೆಯನ್ನು ಹೊರಡಿವುದೇ, ತಯಾರಾಗಿದ್ದೀರಾ? ಸಾಹಸದಿಂದ ಒಪ್ಪಿಕೊಳ್ಳುತ್ತಿಲ್ಲ. ಯೋಚಿಸುತ್ತಿದ್ದಾರೆ, ಸ್ವಲ್ಪ ಒಂದು ದಿನ ಸಿಕ್ಕರೆ ಒಳ್ಳೆಯದು ಎಂದು. ನಾನಿಲ್ಲದೆ ಇದು ಆಗಿ ಹೋಗಬಾರದು, ಇನ್ನೊಂದು ಆಗಿ ಹೋಗಬಾರದು, ಈ ವ್ಯರ್ಥ ಸಂಕಲ್ಪವು ಸಹ ಮಾಡಬಾರದು. ಬ್ರಹ್ಮಾ ತಂದೆ ಟ್ರಾನ್ಸ್ಫರ್ (ವರ್ಗಾವಣೆ) ಆದರೂ ಎಂದರೆ ಏನು ಯೋಚಿಸಿದರು- ನಾನು ಇಲ್ಲದೆ ಏನಾಗುವುದು? ಹೇಗೆ ನಡೆಯುವುದು, ನಡೆಯಲು ಆಗುವುದಿಲ್ಲ. ಹೋಗಲಿ ಒಂದು ಡೈರೆಕ್ಷನ್(ನಿರ್ದೇಶನ) ಆದರೂ ಕೊಡುತ್ತೇನೆ, ಡೈರೆಕ್ಷನ್ ಕೊಟ್ಟರೆ? ತಮ್ಮ ಸಂಪನ್ನ ಸ್ಥಿತಿಯ ಮೂಲಕ ನಿರ್ದೇಶನ ಕೊಟ್ಟರು, ಮುಖದಿಂದ ಅಲ್ಲ. ಈ ರೀತಿ ತಯಾರಾಗಿದ್ದೀರಾ? ಆರ್ಡರ್ ಸಿಕ್ಕಿತು ಹಾಗೂ ನಾನು ಬಿಟ್ಟರೆ ಎಲ್ಲವೂ ಬಿಟ್ಟು ಹೋಗುತ್ತದೆ. ಏರುಪೇರು ಮಾಡುವುದೇ? ಈ ರೀತಿ ಮಾಡಬೇಕು- ಇದನ್ನು ಹೇಳಿಬಿಡುತ್ತೇವೆ. ನಿಮ್ಮನ್ನು ಕೇಳಿ ಆಜ್ಞೆ ಹೊರಡಿಸುವುದಿಲ್ಲ, ದಿನಾಂಕವನ್ನು ನಿಗದಿ ಮಾಡುವುದಿಲ್ಲ. ಇದ್ದಕ್ಕಿದ್ದಂತೆ ಆರ್ಡರ್ ಕೊಡುತ್ತೇವೆ ಬಂದುಬಿಡಿ, ಅಷ್ಟೇ. ಇದಕ್ಕೆ ಹೇಳಲಾಗುತ್ತದೆ ಡಬಲ್ ಲೈಟ್ ಫರಿಶ್ತೆ. ಆರ್ಡರ್ ಸಿಕ್ಕಿತು ಹಾಗೂ ಹೊರಟೆವು. ಯಾವಾಗ ಮೃತ್ಯುವಿನ ಆರ್ಡರ್ ಬರುತ್ತದೆ ಆಗ ಯೋಚಿಸುತ್ತೀರಾ ಸೆಂಟರ್ ನೋಡಬೇಕು, ಕಬೋರ್ಡ್ ನೋಡಬೇಕು, ವಿದ್ಯಾರ್ಥಿಗಳನ್ನು ನೋಡಬೇಕು, ಸ್ಥಾನವನ್ನು ನೋಡಬೇಕು....! ಇತ್ತೀಚೆಗಂತೂ ನನ್ನದು ನನ್ನದು ಎನ್ನುವುದರಲ್ಲಿ ಸ್ಥಾನದ ಜಂಜಾಟ ಬಹಳ ಆಗಿ ಹೋಗಿದೆ, ನನ್ನ ಏರಿಯಾ( ಸ್ಥಾನ)! ವಿಶ್ವ ಕಲ್ಯಾಣಕಾರಿಗಳಿಗೆ ಮಿತವಾದ ಸ್ಥಾನ ಇರುತ್ತದೆಯೇ? ಇದೆಲ್ಲವನ್ನು ಬಿಡಬೇಕಾಗುತ್ತದೆ. ಇದು ಸಹ ದೇಹ ಅಭಿಮಾನವಾಗಿದೆ. ದೇಹ ಭಾನ ಹಗುರವಾಗಿದೆ, ಆದರೆ ದೇಹ ಅಭಿಮಾನ ಇದು ಬಹಳ ಸೂಕ್ಷ್ಮವಾಗಿದೆ. `ನನ್ನದು ನನ್ನದು' ಇದಕ್ಕೆ ದೇಹ ಅಭಿಮಾನ ಎಂದು ಹೇಳಲಾಗುತ್ತದೆ. ಎಲ್ಲಿ `ನನ್ನದು' ಎನ್ನುವುದು ಇರುತ್ತದೆಯೋ ಅಲ್ಲಿ ಅವಶ್ಯವಾಗಿ ಅಭಿಮಾನ ಇರುತ್ತದೆ. ತಮ್ಮ ವಿಶೇಷತೆಯ ಪ್ರತಿಯಾಗಿರಲಿ, ನನ್ನ ವಿಶೇಷತೆಯಾಗಿದೆ, ನನ್ನ ಗುಣವಾಗಿದೆ, ನನ್ನ ಸೇವೆಯಾಗಿದೆ, ಇದೆಲ್ಲವೂ ನನ್ನತನವಾಗಿದೆ- ಇದು ಪ್ರಭು ಪ್ರಸಾದವಾಗಿದೆ, ನನ್ನದಲ್ಲ. ಪ್ರಸಾದವನ್ನು ನನ್ನದು ಎಂದುಕೊಳ್ಳುವುದು, ಇದು ದೇಹ ಅಭಿಮಾನವಾಗಿದೆ. ಈ ಅಭಿಮಾನವನ್ನು ಬಿಡುವುದೇ ಸಂಪನ್ನರಾಗುವುದಾಗಿದೆ. ಆದ್ದರಿಂದ ವರ್ಣನೆ ಮಾಡುತ್ತಿರಲ್ಲವೇ ಫರಿಶ್ತೆ ಅರ್ಥಾತ್ ದೇಹ ಅಭಿಮಾನವು ಇಲ್ಲ, ದೇಹ ಭಾನವೂ ಇಲ್ಲ, ಭಿನ್ನ-ಭಿನ್ನ ನನ್ನತನದ ಸಂಬಂಧಗಳು ಇಲ್ಲ, ಫರಿಶ್ತೆ ಅರ್ಥಾತ್ ಈ ಹದ್ದಿನ ಸಂಬಂಧಗಳು ಸಮಾಪ್ತಿ. ಹಾಗಾದರೆ ಈಗ ಯಾವ ತಯಾರಿ ಮಾಡುವಿರೀ? ಬ್ರಹ್ಮಾ ತಂದೆಯ ಧ್ವನಿಯನ್ನು ಗಮನವಿಟ್ಟು ಕೇಳಿ, ಅವರು ಆಹ್ವಾನ ಮಾಡುತ್ತಿದ್ದಾರೆ. ತಂದೆ ಹೇಳುತ್ತಾರೆ ಸಮಾಪ್ತಿಯ ನಗಾರಿ ಮೊಳಗಿಸುವುದಂತು ಬಹಳ ಸಹಜವಾಗಿದೆ, ಯಾವಾಗ ಬೇಕಾದರೂ ಆಗ ಮೊಳಗಿಸಬಹುದು ಆದರೆ ಕಡಿಮೆ ಎಂದರೆ ಸತ್ಯ ಯುಗ ಆದಿಯ ಒಂಬತ್ತು ಲಕ್ಷ ಆತ್ಮರು ಎವರ್ ರೆಡಿಯಾಗಿರಬೇಕಲ್ಲವೇ( ಸದಾ ತಯಾರಾಗಿರಬೇಕು)! ಭಲೇ ನಂಬರ್ ಇರಲಿ, ನಂಬರ್ ಒನ್ ಅಂತೂ ಕಡಿಮೆ ಇರುತ್ತಾರೆ. ಕಡಿಮೆ ಎಂದರೆ ಕಡಿಮೆ 108 ಮೊದಲನೇ ನಂಬರ್, 16,000 ಎರಡನೆಯ ನಂಬರ್, 9 ಲಕ್ಷ ಮೂರನೆಯ ನಂಬರ್. ಆದರೆ ಇಷ್ಟಾದರೂ ತಯಾರಾಗಬೇಕು. ರಾಜಧಾನಿ ಅಂತೂ ತಯಾರಾಗಬೇಕು.

ಈಗ ಫಲಿತಾಂಶದಲ್ಲಿ ಬಾಪ್ದಾದಾರವರು ನೋಡಿದರು- ವರ್ತಮಾನ ಸಮಯ ಮಾಯೆಯ ಸ್ವರೂಪ ನಕಾರಾತ್ಮಕ ಹಾಗೂ ವ್ಯರ್ಥ ಸಂಕಲ್ಪದ ರೂಪದಲ್ಲಿ ಬಹುತೇಕರಲ್ಲಿ ಇದೆ. ವಿಶ್ವಕಲ್ಯಾಣಕಾರಿಯ ಸ್ಟೇಜ್ ಆಗಿದೆ- ಸದಾ ಬೇಹದ್ದಿನ ವೃತ್ತಿಯಲ್ಲಿ ಇರುವುದು, ದೃಷ್ಟಿಯಲ್ಲಿ ಇರುವುದು ಹಾಗೂ ಬೇಹದ್ದಿನ ಸ್ಥಿತಿಯಲ್ಲಿರುವುದು. ವೃತ್ತಿಯಲ್ಲಿ ಸ್ವಲ್ಪವೂ ಯಾವುದೇ ಆತ್ಮನ ಪ್ರತಿ ನಕಾರಾತ್ಮಕತೆ ಅಥವಾ ವ್ಯರ್ಥ ಭಾವನೆ ಇರದಿರಲಿ. ನಕಾರಾತ್ಮಕ ಮಾತುಗಳನ್ನು ಪರಿವರ್ತನೆ ಮಾಡುವುದು, ಇದು ಬೇರೆ ಮಾತಾಗಿದೆ. ಆದರೆ ಯಾರು ಸ್ವಯಂ ನಕಾರಾತ್ಮಕ ವೃತ್ತಿಯವರಾಗಿರುತ್ತಾರೆ ಅವರು ಅನ್ಯರ ನಕಾರಾತ್ಮಕತೆಯನ್ನು ಸಹ ಸಕಾರಾತ್ಮಕತೆಯಲ್ಲಿ ಬದಲಾಯಿಸಲು ಸಾಧ್ಯವಿಲ್ಲ ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಸೂಕ್ಷ್ಮ ಪರಿಶೀಲನೆ ಮಾಡಿಕೊಳ್ಳಬೇಕು- ವೃತ್ತಿ, ದೃಷ್ಟಿ ಸರ್ವರ ಪ್ರತಿ ಸದಾ ಬೇಹದ್ದಿನ ಹಾಗೂ ಕಲ್ಯಾಣಕಾರಿಯಾಗಿದೆಯೇ ಎಂದು? ಸ್ವಲ್ಪವೂ ಸಹ ಕಲ್ಯಾಣದ ಭಾವನೆಯ ಹೊರತು ಹದ್ದಿನ

ಭಾವನೆ ಹದ್ದಿನ ಸಂಕಲ್ಪ, ಮಾತು ಸೂಕ್ಷ್ಮದಲ್ಲಿಯೂ ಸಹ ಸಮಾವೇಶ ಆಗಿಲ್ಲ ತಾನೇ? ಒಂದುವೇಳೆ ಸೂಕ್ಷ್ಮದಲ್ಲಿ ಸಮಾವೇಶ ಆಗಿದ್ದರೆ, ಅದರ ಚಿಹ್ನೆಯಾಗಿದೆ- ಸಮಯ ಬಂದಾಗ ಅಥವಾ ಸಮಸ್ಯೆ ಬಂದಾಗ ಆ ಸೂಕ್ಷ್ಮ ವಸ್ತು ಸ್ಥೂಲದಲ್ಲಿ ಬರುತ್ತದೆ. ಸದಾ ಸರಿಯಾಗಿರುತ್ತಾರೆ ಆದರೆ ಸಮಯದಲ್ಲಿ ಅದು ಇಮರ್ಜ್ ಆಗಿ ಹೋಗುತ್ತದೆ. ನಂತರ ಯೋಚಿಸುತ್ತಾರೆ- ಇವರು ಇರುವುದೇ ಹೀಗೆ. ಈ ಮಾತೇ ಈ ರೀತಿ ಆಗಿದೆ. ಈ ವ್ಯಕ್ತಿಯೇ ಹೀಗಿದ್ದಾರೆ. ವ್ಯಕ್ತಿ ಹೀಗಿದ್ದಾರೆ ಆದರೆ ನನ್ನ ಸ್ಥಿತಿ ಶುಭ ಭಾವನೆ, ಹದ್ದಿನ ಭಾವನೆಯದಾಗಿದೆಯೇ ಅಥವಾ ಇಲ್ಲವೇ? ತಮ್ಮ ತಪ್ಪನ್ನು ಪರಿಶೀಲಿಸಿಕೊಳ್ಳಿ. ತಿಳಿಯಿತೆ.

ಮಾತುಗಳನ್ನು ನೋಡಬೇಡಿ, ತಮ್ಮನ್ನು ನೋಡಿಕೊಳ್ಳಿ. 99 ರಲ್ಲಿ ಯಾವುದು ಬ್ರಹ್ಮಾ ತಂದೆಯ ಹೆಜ್ಜೆ ಅದು ಬ್ರಹ್ಮಾ ತಂದೆಯ ಸಮಾನ ನನ್ನ ಪ್ರತಿಯೊಂದು ಹೆಜ್ಜೆಯಾಗಿರಲಿ ಇದರ ತೀವ್ರ ಅಭ್ಯಾಸ ಮಾಡಿ.

ಬ್ರಹ್ಮಾ ತಂದೆಯೊಂದಿಗೆ ಎಲ್ಲರಿಗೂ ಪ್ರೀತಿ ಇದೆ ಅಲ್ಲವೇ. ಪ್ರೀತಿಯನ್ನೇ ಅನುಸರಿಸಲಾಗುತ್ತದೆ. ತಂದೆಯ ಸಮಾನ ಆಗಲೇಬೇಕು, ಸರಿಯೇ! 99ರಲ್ಲಿ ಎಲ್ಲರೂ ತಯಾರಾಗುತ್ತೀರಾ? ಒಂದು ವರ್ಷ ಇದೆ. ಇದಾಯಿತು, ಇದಾಯಿತು.. ಈ ರೀತಿ ಯೋಚಿಸಬೇಡಿ. ಇದಂತೂ ಆಗಲೇಬೇಕು. ಮುಂಚಿತವಾಗಿಯೇ ಗೊತ್ತಿದೆ ಇವೆಲ್ಲವೂ ಆಗಲೇಬೇಕು ಆದರೆ ತಂದೆಯ ಸಮಾನ ಫರಿಶ್ತೆ ಆಗಲೇಬೇಕು. ತಿಳಿಯಿತೆ? ಮಾಡಬೇಕಲ್ಲವೇ? ಮಾಡಲು ಸಾಧ್ಯವೇ? ಒಂದು ವರ್ಷದಲ್ಲಿ ತಯಾರಾಗಿ ಬಿಡುತ್ತೀರಾ ಅಥವಾ ಅರ್ಧ ವರ್ಷದಲ್ಲಿ ತಯಾರಾಗುತ್ತೀರಾ? ನಿಮ್ಮ ಸಂಪನ್ನ ರಾಗುವುದಕ್ಕಾಗಿ ಬ್ರಹ್ಮಾ ತಂದೆಯು ಸಹ ಆಹ್ವಾನ ಮಾಡುತ್ತಿದ್ದಾರೆ ಹಾಗೂ ಪ್ರಕೃತಿಯು ಸಹ ನಿರೀಕ್ಷಿಸುತ್ತಿದೆ. ಆರು ತಿಂಗಳಲ್ಲಿ ಎವರ್ ರೆಡಿ(ಸದಾ ಸಿದ್ಧ) ಆಗಿ, ಹೋಗಲಿ ಆರು ತಿಂಗಳಲ್ಲ ಒಂದು ವರ್ಷದಲ್ಲಾದರೂ ಆಗಿರಿ. ಏರುಪೇರಿನಲ್ಲಿ ಬರಬಾರದು, ಅಚಲರಾಗಿರಬೇಕು. ಲಕ್ಷವನ್ನು ಬಿಡಬಾರದು, ತಂದೆಯ ಸಮಾನ ಆಗಲೇಬೇಕು, ಏನೇ ಆಗಲಿ. ಯಾವುದೇ ಬ್ರಾಹ್ಮಣರು ಅಲುಗಾಡಿಸಲಿ, ಬ್ರಾಹ್ಮಣರು ಅಡ್ಡಿಯಾಗಿ ನಿಮ್ಮನ್ನು ತಡೆಯಲಿ ಸಮ್ಮುಖದಲ್ಲಿ ಬರಲಿ ಆದರೂ ಸಹ ನಾವು ಸಮಾನರಾಗಲೇಬೇಕು. ಈ ಅಭಿಪ್ರಾಯ ಇಷ್ಟವಿದೆಯೇ?( ಬಾಪ್ದಾದಾರವರು ಎಲ್ಲರಿಂದ ಕೈಯೆತ್ತಿಸಿದರು ಹಾಗೂ ಎಲ್ಲರ ಫೋಟೋ ತೆಗೆಸಿದರು) ಈ ಚಿತ್ರವನ್ನು ಎಲ್ಲರಿಗೂ ಕಳುಹಿಸುತ್ತೇವೆ. ಇಲ್ಲಿನ ಮೂವಿಯಲ್ಲಿ ಕೆಲವರು ಬರದೇ ಇರಬಹುದು ಆದರೆ ವತನದ ಮೂವಿಯಲ್ಲಿ ಯಾರೂ ಸಹ ಮರೆಯಾಗುವುದಿಲ್ಲ.

ಒಳ್ಳೆಯದು, ತಂದೆ ಹೇಳುತ್ತಾರೆ ಒಂದು ಕ್ಷಣದಲ್ಲಿ ಎಲ್ಲರೂ ಈಗ ವಿದೇಹೀಯಾಗಲು ಸಾಧ್ಯವೇ? ಹಾಗಾದರೆ ಈಗ ಒಂದು ಕ್ಷಣದಲ್ಲಿ ವಿದೇಹಿ ಸ್ಥಿತಿಯಲ್ಲಿ ಸ್ಥಿತರಾಗಿ ಬಿಡಿ.(ಡ್ರಿಲ್) ಒಳ್ಳೆಯದು, ಈಗ ದೇಹದಲ್ಲಿ ಬಂದುಬಿಡಿ. ಈಗ ಮತ್ತೆ ವಿದೇಹಿ ಆಗಿ ಬಿಡಿ. ಈ ರೀತಿ ಇಡೀ ದಿನದಲ್ಲಿ ಮತ್ತೆ ಮತ್ತೆ ಒಂದು ಕ್ಷಣ ಸಿಕ್ಕರೂ ಸಹ ಮತ್ತೆ ಮತ್ತೆ ಈ ಅಭ್ಯಾಸವನ್ನು ಮಾಡುತ್ತಾ ಇರಿ. ಒಳ್ಳೆಯದು.

ಸರ್ವ ಶ್ರೇಷ್ಠ ಬ್ರಾಹ್ಮಣ ಆತ್ಮರಿಗೆ ಸದಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆ ಇಡುವಂತಹ ಫಾಲ್ಲೋ ಫಾದರ್ (ತಂದೆಯನ್ನು ಅನುಕರಿಸುವಂತಹ) ಆಜ್ಞಾಕಾರಿ ಮಕ್ಕಳಿಗೆ. ಸದಾ ಬ್ರಹ್ಮಾ ತಂದೆಯ ಸಮಾನ ಫರಿಶ್ತಾ ಸ್ಥಿತಿಯಲ್ಲಿ ಸ್ಥಿತರಾಗುವಂತಹ ಸಮೀಪ ಆತ್ಮರಿಗೆ, ಸದಾ ಪ್ರಕೃತಿಪತಿ ಆಗಿ ಪ್ರಕೃತಿಯ ಪ್ರತಿಯೊಂದು ದೃಶ್ಯವನ್ನು ಸಾಕ್ಷಿಯಾಗಿ ನೋಡುವಂತಹ ಅಚಲ- ಅಡೋಲ ಆತ್ಮಗಳಿಗೆ, ಸದಾ ಬೇಹದ್ದಿನ ವೃತ್ತಿ ಹಾಗೂ ದೃಷ್ಟಿಯಲ್ಲಿ ಇರುವಂತಹ ಭಾಗ್ಯವಂತ ಮಕ್ಕಳಿಗೆ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ. ಹೊರಗೆ ಯಾರೆಲ್ಲಾ ಕೇಳುತ್ತಿದ್ದೀರಿ, ದೇಶದಲ್ಲಾಗಲಿ ವಿದೇಶದಲ್ಲಾಗಲಿ ಆ ಮಕ್ಕಳಿಗೂ ಸಹ ವಿಶೇಷ ನೆನಪು ಪ್ರೀತಿ.

ವರದಾನ: ವರದಾನ: ಅವಿನಾಶಿ ಪ್ರಾಪ್ತಿಗಳ ಸ್ಮೃತಿಯಿಂದ ತಮ್ಮ ಶ್ರೇಷ್ಠ ಭಾಗ್ಯದ ಖುಶಿಯಲ್ಲಿರುವಂತಹ ಇಚ್ಛಾ ಮಾತ್ರಂ ಅವಿದ್ಯೆ ಭವ.

ಯಾರ ತಂದೆಯೇ ಭಾಗ್ಯವಿಧಾತ ಆಗಿದ್ದಾಗ ಅವರ ಭಾಗ್ಯ ಏನಿರುವುದು! ಸದಾ ಇದೇ ಖುಶಿಯಿರಲಿ ಭಾಗ್ಯವಂತೂ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ. "ವ್ಹಾ ನನ್ನ ಶ್ರೇಷ್ಠ ಭಾಗ್ಯ ಮತ್ತು ಭಾಗ್ಯ ವಿಧಾತ ತಂದೆ" ಇದೇ ಗೀತೆಯನ್ನು ಹಾಡುತ್ತಾ ಖುಶಿಯಲ್ಲಿ ಹಾರುತ್ತಾ ಇರಿ. ಇಂತಹ ಅವಿನಾಶಿ ಖಜಾನೆ ಸಿಕ್ಕಿದೆ. ಯಾವುದು ಅನೇಕ ಜನ್ಮ ಜೊತೆಯಲ್ಲಿರುವುದು, ಅದನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ, ಲೂಟಿ ಮಾಡಲು ಸಾಧ್ಯವಿಲ್ಲ. ಎಷ್ಟು ದೊಡ್ಡ ಭಾಗ್ಯವಿದೆ ಅದರಲ್ಲಿ ಯಾವುದೂ ಇಚ್ಛೆ ಇಲ್ಲ, ಮನಸ್ಸಿನ ಖುಶಿ ಸಿಕ್ಕಿದೊಡನೆ ಎಲ್ಲಾ ಪ್ರಾಪ್ತಿಗಳು ಆಯಿತು. ಯಾವುದೇ ಅಪ್ರಾಪ್ತಿಯ ವಸ್ತುಗಳಿಲ್ಲ ಆದ್ದರಿಂದ ಇಚ್ಛಾ ಮಾತ್ರಂ ಅವಿದ್ಯೆ ಆಗಿ ಬಿಟ್ಟಿರಿ.

ಸ್ಲೋಗನ್: ಸ್ಲೋಗನ್: ವಿಕರ್ಮ ಮಾಡುವಂತಹ ಸಮಯ ಕಳೆದು ಹೋಯಿತು, ಈಗ ವ್ಯರ್ಥ ಸಂಕಲ್ಪ, ಮಾತು ಸಹ ಬಹಳ ಮೋಸ ಮಾಡುವುದು.